20-16-10 ಭೀಮನ ಕಲ್ಲು ಅಥವಾ ಮಧ್ವಾಚಾರ್ಯರ ಬಂಡೆ ಎಂದು ಕರೆಯಲಾಗುವ ಕಲ್ಲುಬಂಡೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) 1975ರ ಅವಧಿಯಲ್ಲಿ ಹರಿಜನ ಜಿಲ್ಲಾಧಿಕಾರಿಯ ಪ್ರಯತ್ನದಿಂದ ಈ ಕಲ್ಲುಬಂಡೆ ನಾಶವಾಗುವುದನ್ನು ತಪ್ಪಿಸಲಾಯಿತೆಂಬ ವಿಷಯ ನಿಜವೇ ;

ಇ) ಆ ಕಲ್ಲು ಬಂಡೆಯ ಮೇಲೆ ಶಿಲಾ ಲೇಖನವಿದ್ದು ಅದರ ರಕ್ಷಣೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ? ಈ ಬಗೆ ಪ್ರಾಚ್ಯ ವಸ್ತು ಸಂಗ್ರಹಾಲಯ ಇಲಾಖೆ ಸೂಚಿಸಿದ ಕ್ರಮವನ್ನು ಈಗಲಾದರೂ ಸರ್ಕಾರ ತೆಗೆದುಕೊಳ್ಳುವುದೇ ?

ಶ್ರೀ ಬಿ. ರಾಚಯ್ಯ (ವಿದ್ಯಾಮಂತ್ರಿಗಳು) —ಅ)' ಭೀಮನ ಕಲ್ಲು" ಅಥವಾ "ಮಧ್ವಾಚಾರ್ಯರ ಬಂಡೆ" ಎಂದು ಕರೆಯಲಾಗುವ ಕಲ್ಲು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ಅದನ್ನು ಸರ್ಕಾರದ ಆದೇಶದ ಸಂಖ್ಯೆ : ಇಡಿ 74 ಟಿಎಯು 79 ದಿನಾಂಕ 7-4-81ರಲ್ಲಿ ಸಂರಕ್ಷಿತ ಸ್ಮಾರಕ ವೆಂದು ಘೋಷಿಸಲಾಗಿದೆ.

ಆ) ಕಲ್ಲು ಬಂಡೆ ನಾಶವಾಗುವುದನ್ನು ತಪ್ಪಿಸಿದ್ದು ನಿಜ.

ಇ) ಕಲ್ಲು ಬಂಡೆಯ ಮೇಲೆ ಶಿಲಾಲೇಖನವಿದ್ದು ಅದರ ರಕ್ಷಣೆಗೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಇಲಾಖೆಯಿಂದ ಕಾರ್ಯ ನಿರ್ವಾಹಕ ಅಭಿಯಂತರು ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ಡಿವಿಜನ್, ಇವರಿಗೆ ಅಂದಾಜು ಪಟ್ಟಿಯನ್ನು ತಯಾರಿಸಲು ಕೋರಲಾಗಿದೆ. ಅವರಿಂದ ಉತ್ತರ ಬಂದ ತಕ್ಷಣವೇ ಮುಂದಿನ ಸಂರಕ್ಷಣೆ ಕಾರ್ಯವನ್ನು ನಡೆಸಲಾಗುವುದು.

ಶ್ರೀ ಎಂ. ಆನಂದರಾವ್.—ಆ ಬಂಡೆ ಸುತ್ತಮುತ್ತಲ್ಲಿರತಕ್ಕಂತ ಕಲ್ಲುಗಳನ್ನು ಒಡೆದು ನಾಶ ಮಾಡತಕ್ಕಂಥದ್ದು ಇನ್ನೂ ಮುಂದುನರಿದಿದೆಯೆಂದು ತಿಳಿದು ಬಂದಿದೆ. ಆದುದರಿಂದ ಅದನ್ನು ತಕ್ಷಣವೇ ತಡೆಯುವುದಕ್ಕೆ ಸರ್ಕಾರದವರು ಏನಾದರೂ ಆಜ್ಞೆ ನೀಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಅದನ್ನು ರಕ್ಷಣೆ ಮಾಡುವುದಕ್ಕೆ ಆದೇಶ ನೀಡುತ್ತೇನೆ.

ಶ್ರೀ ಪಿ. ತಿಪ್ಪಯ್ಯ.—ನನ್ನ ಕ್ಷೇತ್ರದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ನನಗೆ ಗೊತ್ತಿಲ್ಲದೇ ಕೇಳಿದ್ದಾರೆ. ಇದರ ಬಗ್ಗೆ ಅವರಿಗೆ ಮಾಹಿತಿ ಬಂದಿರಬಹುದು ಕೇಳಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ರಾಜ್ಯದಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯಲು ಹೊರಡಿಸಿರುವ ಆದೇಶವನ್ನು ಜಾರಿಗೊಳಿಸುವ ವಿಚಾರ

124 ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ) : -ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಹಾಗೂ ತೋಟಿಗಾರಿಕೆ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :—

ಅ) 1982ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಪಶುವೈದ್ಯಶಾಲೆಗಳನ್ನು ಕರ್ನಾಟಕದಲ್ಲಿ ತೆರೆಯಲು ಹೊರಡಿಸಲಾದ ಆದೇಶವನ್ನು ತಡೆಯುವ ಆಜ್ಞೆಯನ್ನು ಹೊರಡಿಸಲಾಗಿದೆಯೆ ;

ಆ) ಹಾಗಿದ್ದಲ್ಲಿ ತಡೆಯಾಜ್ಞೆಯನ್ನು ಹೊರಡಿಸಲು ಕಾರಣಗಳನ್ನು ತಿಳಿಸಿ ;

ಇ) ಹಿಂದಿನ ಸರ್ಕಾರ ಹೊರಡಿಸಿದ ಆದೇಶವನ್ನು ಜಾರಿಗೆ ತರುವುದು ಯಾವಾಗ ?

ಶ್ರೀ ವಿಶ್ವನಾಥರೆಡ್ಡಿ, (ಪಶುಸಂಗೋಪನಾ ಮತ್ತು ಪಶುವೈದ್ಯ ಹಾಗೂ ತೋಟಿಗಾರಿಕೆ ಮಂತ್ರಿಗಳು) :—ಅ) ಇಲ್ಲ.

ಆ) ಆ ನಲ್ಲಿ ಹೇಳಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸರಕಾರದ ಪರಿಶೀಲನೆಯಲ್ಲಿದೆ

ಶ್ರೀ ಗೋವಿಂದ ಪಿ. ಒಡೆಯರಾಜ್.—ಉತ್ತರಗಳು ಒಂದಕ್ಕೊಂದು ತದ್ವಿರುದ್ಧವಾಗಿವೆ. ಹಿಂದಿನ ಸರ್ಕಾರದವರು ಡಿಸೆಂಬರ್‌ನಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ 200 ಪಶು ವೈದ್ಯ ಶಾಲೆಗಳನ್ನು ಮಂಜೂರ್ಮಾಡಿದರು. ಅದನ್ನು ತಡೆಹಿಡಿಯಲಾಗಿದೆಯೇ ಎಂದರೆ ಇಲ್ಲವೆಂದು ಹೇಳಿದ್ದಾರೆ. ಹಿಂದಿನ ಸರ್ಕಾರದ ಆಜ್ಞೆಯನ್ನು ಯಾವಾಗ ಜಾರಿಗೆ ತರುತ್ತೀರೆಂದರೆ ಅದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಹೀಗೆ ಒಂದಕ್ಕೊಂದು ತದ್ವಿರುದ್ಧವಾಗಿವೆ. ಒಂದು ವೇಳೆ ತಡೆಹಿಡಿಯದಿದ್ದರೆ ಪರಿಶೀಲನೆ ಮಾಡುವ ಪ್ರಶ್ನೆ ಎಲ್ಲಿತ್ತು ?

ಶ್ರೀ ವಿಶ್ವನಾಥ ರೆಡ್ಡಿ.—ಸದಸ್ಯರ ಮೊದಲನೇ ಪ್ರಶ್ನೆಗೆ ಆಜ್ಞೆಯನ್ನು ತಡೆಹಿಡಿದಿಲ್ಲವೆಂದು ಹೇಳಿದ್ದೇನೆ. ಆಂದಾಗ ಅವರೇನು ಆಜ್ಞೆ ಹೊರಡಿಸಿದಾರೆ ಅದನ್ನು ತಡೆಹಿಡಿದಿಲ್ಲ ಎಂಬುದು ಸ್ಪಷ್ಟ. ಆದನ್ನು ಜಾರಿಗೆ ತರುವುದು ಯಾವಾಗ ಎಂದು 3ನೇ ಪ್ರಶ್ನೆಯಲ್ಲಿ ಕೇಳಿದ್ದಾರೆ. ಜಾರಿಗೆ ತರಬೇಕಾದರೆ ಅದಕ್ಕೆ ಸಿಬ್ಬಂದಿ ಇತ್ಯಾದಿ ಬೇಕು. ಈ ಎಲ್ಲ ವ್ಯವಸ್ಥೆ ಆದ ಮೇಲೆ ಜಾರಿಗೆ ತರಬೇಕು. ಆದ್ದರಿಂದ, ಆಜ್ಞೆಯನ್ನು ತಡೆಹಿಡಿದಿಲ್ಲ, ಆದರೆ ಅದನ್ನು ಜಾರಿಗೆ ತರುವುದಕ್ಕೆ ಬೇಕಾದ ಅನುಕೂಲತೆ ಒದಗಿಸಿದ ಮೇಲೆ ಜಾರಿಗೆ ತರಬೇಕಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್ .— ಡಿಸೆಂಬರ್‌ನಲ್ಲಿ ಹೊರಡಿಸಲಾದ ಆಜ್ಞೆಯನ್ನು ತಡೆಹಿಡಿಯಲಾಗಿದೆಯೆ ? ಒಂದು ವೇಳೆ ತಡೆಹಿಡಿಯಲಾಗಿದ್ದರೆ ಏತಕ್ಕೆ ಜಾರಿಗೆ ಕೊಟ್ಟಿಲ್ಲ ? 200 ಪಶು ವೈದ್ಯ ಶಾಲೆಗಳನ್ನು ಮುಂಜೂರ್ಮಾಡಿದರೂ ಏತಕ್ಕೆ ಅವನ್ನು ತೆರೆದಿಲ್ಲ? ಡಿಸೆಂಬರ್‌ನಲ್ಲಿ ಹಿಂದಿನ ಸರ್ಕಾರದವರು ಆಜ್ಞೆ ಹೊರಡಿಸಿ 200 ಪಶು ವೈದ್ಯ ಶಾಲೆಗಳನ್ನು ಮುಂಜೂರ್ಮಾಡಿದ್ದರೂ ಅದನ್ನು ಜಾರಿಗೆ ಕೊಡದಿರುವುದಕ್ಕೆ ಇರತಕ್ಕ ಪ್ರಬಲವಾದ ಕಾರಣವೇನು ?

ಶ್ರೀ ವಿಶ್ವನಾಥರೆಡ್ಡಿ .—ಡಿಸೆಂಬರ್‌ನಲ್ಲಿ ಆಜ್ಞೆ ಹೊರಡಿಸಿದ ಮೇಲೆ ಎಷ್ಟೋ ಸಲಹೆ ಸೂಚನೆಗಳು ಸಾರ್ವಜನಿಕರಿಂದ ಮತ್ತು ವಿಧಾನಸಭಾ ಸದಸ್ಯರಿಂದ ಬರುತ್ತಿವೆ. ಅವನ್ನೆಲ್ಲ ಜೊತೆಗಟ್ಟಿಕೊಂಡು ಸಿಬ್ಬಂದಿ ನೇಮಕಾತಿ ಆದಮೇಲೆ ಅವುಗಳನ್ನು ತೆರೆಯಬೇಕಾಗುತ್ತದೆ. ನಮಗೆ ಇವತ್ತು 771 ಸ್ಟಾಕ್‌ಮೆನ್ ಮತ್ತು 721 ಕಾಂಪೌಂಡರ್ಸ್ ಕೊರತೆ ಇದೆ. ಎಷ್ಟೋ ಆಸ್ಪತ್ರೆಗಳಲ್ಲಿ ಈ ಹುದ್ದೆಗಳಿಗೆ ಜನರಿಲ್ಲ. ಆದ್ದರಿಂದ, ಬೇಕಾದ ಸಿಬ್ಬಂದಿ ವರ್ಗ ಇಲ್ಲದೆ ಆರ್. ಪಿ. ಡಿ. ಮತ್ತು ಪಿ. ಡಿ. ಗಳನ್ನು ಕೊಟ್ಟರೆ ಜನರಿಗೆ ಅನುಕೂಲವಾಗುವುದಿಲ್ಲ. ಕೇವಲ ಆಜ್ಞೆಯನ್ನು ಜಾರಿಗೊಳಿಸಿದರೆ ತಾಗುತ್ತದೆ ಅಷ್ಟೆ. ಮೊದಲು ಸ್ಟಾಕ್‌ಮೆನ್ ಮತ್ತು ಕಾಂಪೌಂಡರ್ಸ್ ವ್ಯವಸ್ಥೆ ಮಾಡಿ ಎಲ್ಲೆಲ್ಲಿ ಸಾಧ್ಯತೆ ಇದೆ ಅಲ್ಲಲ್ಲಿ ಬಂದೊಂದನ್ನು ಕಾರ್ಯಗತಗೊಳಿಸಬೇಕೆಂದಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್ .—ಕಾಂಪೌಂಡರ್ಸ್ ಮತ್ತು ಸ್ಟಾಕ್‌ಮೆನ್‌ಗಳನ್ನು ಯಾವಾಗ ನೇಮಕ ಮಾಡುತ್ತೀರಿ ?

ಶ್ರೀ ವಿಶ್ವನಾಥ ರೆಡ್ಡಿ .—ಕಳೆದ 5 ವರ್ಷಗಳಿಂದ ಪ್ರತಿವರ್ಷ 200 ಆರ್. ಪಿ. ಡಿ. ಮತ್ತು ಪಿ. ಡಿ. ಗಳನ್ನು ಮಾಡುತ್ತಾ ಹೋಗುತ್ತಿದ್ದಾರೆ. ಆದರೆ ಸಿಬ್ಬಂದಿ ಬಗ್ಗೆ ಲಕ್ಷ್ಯ ಇಲ್ಲ. 5 ವರ್ಷಗಳಿಂದ ಆಗಿರತಕ್ಕ ಅನಾನುಕೂಲತೆಗಳನ್ನು ಮೊದಲು ವಿಚಾರ ಮಾಡಬೇಕಾಗಿದೆ. ಇದು ಬೃಹದಾಕಾರವಾದ ಸಮಸ್ಯೆಯಾಗಿದೆ. ಆದ್ದರಿಂದ, ಇದನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆರ್. ಪಿ. ಡಿ. ಬಗ್ಗೆ ಬಂದು ಗಮನ ಸೆಳೆಯುವ ಸೂಚನೆಯನ್ನು ಸಹ ಕಳುಹಿಸಿಕೊಡಲಾಗಿದೆ. ಆದಕ್ಕೆ ಇದುವರೆಗೆ ಉತ್ತರ ಬಂದಿಲ್ಲ.

ಶ್ರೀ ವೈ. ರಾಮಕೃಷ್ಣ .—ವೈದ್ಯರ ಹುದ್ದೆಗೆ ಅರ್ಜಿ ಕರೆದಾಗ ಸಾಕಷ್ಟು ಅರ್ಜಿಗಳು ಬರುತ್ತವೆ.

ಉಪಾಧ್ಯಕ್ಷರು .—ಈ ವಿಷಯದ ಬಗ್ಗೆ ಹೆಚ್ಚು ಚರ್ಚೆ ಮಾಡಬೇಕಾಗಿದ್ದರೆ ನೋಟೀಸ್ ಕೊಡಿ ಅರ್ಧ ಗಂಟೆಯ ಚರ್ಚೆಗೆ ಅನಕಾಶ ಮಾಡಿಕೊಡುತ್ತೇನೆ.

ರಾಜ್ಯದಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಹುದ್ದೆಗಳ ಬಗ್ಗೆ

125 ಶ್ರೀ ಬಿ. ಸ್ವಾಮಿರಾವ್, (ಹೊಸನಗರ):—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :—

ಅ) ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ನೇಮಕಾತಿಯನ್ನು ಹಿಂದಿನ ಸಾರಿ ಯಾವಾಗ ಮಾಡಲಾಯಿತು ;

ಆ) ರಾಜ್ಯದಲ್ಲಿ ಈಗ ಎಷ್ಟು ಸ್ಥಾನಗಳು ಖಾಲಿ ಇವೆ;

ಇ) ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ವಿದ್ಯಾಮಂತ್ರಿಗಳು):—ಅ) ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 1 ಡಿಪಿಇ 81 ದಿನಾಂಕ 23-4-81 ರಂದು ಹೊರಡಿಸಲಾದ ವಿಶೇಷ ನೇಮಕಾತಿ ನಿಯಮಗಳು 1981ರ ಆನ್ವಯ 1981ನೇ ಸಾಲಿನಲ್ಲಿ ನೇಮಕಾತಿಯನ್ನು ನಡೆಸಲಾಯಿತು.

ಆ) 9, 221. ಇದರಲ್ಲಿ 7364 ಅಭ್ಯರ್ಥಿಗಳು ಸ್ಥಳೀಯ ಅಭ್ಯರ್ಥಿಗಳಾಗಿ ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಇ) ರಾಯಸ ಅರ್ಜಿ (ರಿಟ್ ಅರ್ಜಿ) ಸಂಖ್ಯೆ 38346 : 82ರಲ್ಲಿ ರಾಜ್ಯದ ಶ್ರೇಷ್ಠ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಬೇಕೆಂದು ನ್ಯಾಯಾಲಯವನ್ನು ಸರ್ಕಾರಿ ವಕೀಲರ ಮುಖಾಂತರ ಕೇಳಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆಗಾಗಿ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳಲ್ಲಿ ಖಾಸಗಿ ಅಭ್ಯರ್ಥಿಗಳ ನೇಮಕಾತಿಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಗುಲ್ಬರ್ಗಾ ಜಿಲ್ಲೆ ಶಹಾಪುರ ತಾಲ್ಲೂಕಿನಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆಗಳನ್ನು ಒದಗಿಸುವ ಬಗ್ಗೆ.

126 ಶ್ರೀ ಬಾಪುಗೌಡ ದರ್ಶನಪುರ (ಶಹಪುರ) ಮಾನ್ಯ ಗ್ರಾಮಾಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ